# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಅಧೀಕ್ಷಕ ಅಭಿಯಂತರರು(ವಿ)
ಕಾ ಮತ್ತು ಪಾ ವೃತ್ತ, ಕೇಶ್ವಾಪೂರ, ಹುಬ್ಬಳ್ಳಿ-23
Tel: 0836-2364144, Fax: 0836-2366184

Superintending Engineer(Ele)
O & M Circle, Keshwapur, Hubballi-23
E-mail ID: seehbl.hescom@gmail.com

Corporate Identity Number (CIN) : U31401KA2002SGC030437

## ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

ಕಾರ್ಯ ಮತ್ತು ಪಾಲನೆ ವೃತ್ತ, ಹೆಸ್ಕಾಂ, ಹುಬ್ಬಳ್ಳಿ, ಧಾರವಾಡ ಜಿಲ್ಲೆ

**ಪ್ರಕರಣ ಸಂಖ್ಯೆ:258**

**ವೇದಿಕೆಯ ಸದಸ್ಯರು:**

ಶ್ರೀಮತಿ **ಶರಣಮ್ಮ ಎಸ್ ಜಂಗಿನ**, ಅಧೀಕ್ಷಕ ಇಂಜಿನೀಯರ(ವಿ) ಕಾ ಮತ್ತು ಪಾ ವೃತ್ತ, ಹೆಸ್ಕಾಂ ಹುಬ್ಬಳ್ಳಿ ಹಾಗೂ ವೇದಿಕೆಯ ಅಧ್ಯಕ್ಷರು.
ಶ್ರೀ **ರೇವಣಸಿದ್ದಪ್ಪ ಗವಣ್ಣವರ**, ಉಪಲೆಕ್ಕ ನಿಯಂತ್ರಣಾಧಿಕಾರಿ ಕಾ ಮತ್ತು ಪಾ ವೃತ್ತ, ಹೆಸ್ಕಾಂ, ಹುಬ್ಬಳ್ಳಿ ಹಾಗೂ ವೇದಿಕೆಯ ಸದಸ್ಯರು.
ಶ್ರೀಮತಿ, **ಲೀಲಾ ಆರ್ ಹಿರೇಮಠ**, ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

**ಶ್ರೀ ಮಂಜುನಾಥ ಜಿ ಬದ್ದಿ,**
C/o ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ,
ಕೇಶ್ವಾಪೂರ ಹುಬ್ಬಳ್ಳಿ-580023 ..............**ದೂರುದಾರರು.**

**ವಿರುದ್ಧ,**

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)
ಕಾ ಮತ್ತು ಪಾ ಶಹರ ಉಪ ವಿಭಾಗ-4,
ಹೆಸ್ಕಾಂ, ಹುಬ್ಬಳ್ಳಿ. ..................**ಪ್ರತಿವಾದಿಗಳು.**

**ಪೀಠಿಕೆ:**

1. ಶ್ರೀ ಮಂಜುನಾಥ ಜಿ ಬದ್ದಿ, ತಾತ್ಕಾಲಿಕ ಸ್ಥಾವರ ಸಂಖ್ಯೆ: TLUNK-60(ID 1593648404) 1 ಕಿ.ವ್ಯಾ ವಿದ್ಯುತ್ ಮಂಜೂರಾತಿ ಬಾರದೊಂದಿಗೆ ದಿನಾಂಕ:30-08-2017 ರಂದು ತಾತ್ಕಾಲಿಕವಾಗಿ ಸಂಪರ್ಕಗೊಂಡಿದ್ದಿರುತ್ತದೆ. ಸದರಿ ಸ್ಥಾವರವು ದಿನಾಂಕ:30-01-2018 ರಂದು ಡಿಸ್‌ಮೆಂಟಲ್ ಮಾಡಿದ್ದಿರುತ್ತದೆ. ತಾತ್ಕಾಲಿಕ ಸ್ಥಾವರದ ಮುಂಗಡ ಬಳಕೆ ಶುಲ್ಕ ಮೊತ್ತ ರೂ.3570/- ಗಳನ್ನು ಹಿಂಪಾವತಿಸಲು ದಿನಾಂಕ:07-02-2018 ರಲ್ಲಿ ಅರ್ಜಿ ಸಲ್ಲಿಸಿದ್ದಿರುತ್ತದೆ. ದಿನಾಂಕ:02-08-2018 ರಂದು ವಿಳಂಭವಾದ ದಿನಗಳಿಗೆ ಕ್ರಮ ಸಂಖ್ಯೆ-14 ಕೆ.ಇ.ಆರ್.ಸಿ.(ಎಸ್.ಓ.ಪಿ) ರೇಗ್ಯೂಲೇಷನ್-2004 ರಂತೆ ಸಾಂತ್ವಾನ ಮೊತ್ತವನ್ನು ಪಾವತಿಸಲು ಲೈಸನ್ಸ್‌ದಾರರಲ್ಲಿ ಅರ್ಜಿ ಸಲ್ಲಿಸಿದ್ದಿರುತ್ತದೆ. ವಿಳಂಭವಾದ ದಿನಗಳಿಗೆ ಕ್ರಮ ಸಂಖ್ಯೆ-14 ಕೆ.ಇ.ಆರ್.ಸಿ.(ಎಸ್.ಓ.ಪಿ) ರೇಗ್ಯೂಲೇಷನ್-2004 ರಂತೆ ಸಾಂತ್ವಾನ ಮೊತ್ತವನ್ನು ಮತ್ತು ಮುಂಗಡ ವಿದ್ಯುತ್ ಬಳಕೆ ಶುಲ್ಕದ(A.C.C) ಮೊತ್ತಕ್ಕೆ ತಿಂಗಳಿಗೆ 1% ಬಡ್ಡಿದರದಲ್ಲಿ ದಂಡವನ್ನು ಪಾವತಿಸಿಕೊಡುವಂತೆ ವಿನಂತಿಸಿ, ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ದಿನಾಂಕ:28-02-2022 ರಂದು ಅರ್ಜಿ ಸಲ್ಲಿಸಿರುತ್ತಾರೆ.
2. ಶ್ರೀ ಮಂಜುನಾಥ ಜಿ ಬದ್ದಿ, ತಾತ್ಕಾಲಿಕ ಸ್ಥಾವರ ಸಂಖ್ಯೆ: TLUNK-60(ID 1593648404) 1 ಕಿ.ವ್ಯಾ ವಿದ್ಯುತ್ ಮಂಜೂರಾತಿ ಬಾರದೊಂದಿಗೆ ದಿನಾಂಕ:30-08-2017 ರಂದು ತಾತ್ಕಾಲಿಕವಾಗಿ ಸಂಪರ್ಕಗೊಂಡಿದ್ದಿರುತ್ತದೆ. ಸದರಿ ಸ್ಥಾವರದ ಮುಂಗಡ ಬಳಕೆ ಶುಲ್ಕವನ್ನು ಮರುಪಾವತಿಗೆ ದಿನಾಂಕ:07-02-2018 ರಂದು ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ಅರ್ಜಿಯನ್ನು ದಿನಾಂಕ:07-02-2018 ರಂದು ಮರುಪಾವತಿಗಾಗಿ ವಿಭಾಗೀಯ ಕಚೇರಿಗೆ ಸಲ್ಲಿಸಲು ಸೂಚಿಸಿ, ಸಹಾಯಕ ಲೆಕ್ಕಾಧಿಕಾರಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದ್ದು ಇರುತ್ತದೆ. ತದನಂತರ ಸಂಬಂಧಪಟ್ಟ ವಿಷಯ ನಿರ್ವಾಹಕರಾದ ಶ್ರೀ ಪ್ರಭಾಕರ ಹುಕ್ಕೇರಿ ಇವರಿಗೂ ಕೂಡ ಸದರಿ ಅರ್ಜಿಯ ಮರುಪಾವತಿಗಾಗಿ ವಿಭಾಗೀಯ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

.......2

ಶ್ರೀ ಮಂಜುನಾಥ ಜಿ ಬದ್ದಿ ಇವರು KERC Standard of Performance ಪ್ರಕಾರ ಹಿಂಪಾವತಿಗೆ ವಿಳಂಭವಾದ ದಿನಗಳಿಗೆ ಪ್ರತಿ ದಿನಕ್ಕೆ ಸಾಂತ್ವಾನ ಮೊತ್ತ ರೂ. 50/- ಗಳನ್ನು ಪಾವತಿಸುವಂತೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಸಹ ಸಹಾಯಕ ಲೆಕ್ಕಾಧಿಕಾರಿಯವರಿಗೆ ಹಾಗೂ ವಿಷಯ ನಿರ್ವಾಹಕರಿಗೆ ಮುಂಗಡ ಬಳಕೆ ಶುಲ್ಕವನ್ನು ಹಿಂಪಾವತಿಸುವ ಅರ್ಜಿಯನ್ನು ವಿಭಾಗೀಯ ಕಚೇರಿಯ ಮಂಜೂರಾತಿಗೆ ಸಲ್ಲಿಸಲು ಸೂಚಿಸಿ ಎಚ್ಚರಿಸಿದರೂ ಸಹ ಈ ಬಗ್ಗೆ ಕ್ರಮ ಕೈಗೊಳದೇ ವಿಳಂಭ ಮಾಡಿದ್ದು, ನವೆಂಬರ್-2021 ರಲ್ಲಿ ಸದರಿ ಗ್ರಾಹಕರ ಇನ್ನೊಂದು ಸ್ಥಾವರದ ಅಕೌಂಟ್ ಐ.ಡಿ-7656072339 ಕ್ಕೆ ಗ್ರಾಹಕರ ಒಪ್ಪಿಗೆಯಂತೆ ಮುಂಗಡ ಬಳಕೆ ಶುಲ್ಕವನ್ನು ವರ್ಗಾವಣೆ ಮಾಡಿರುತ್ತಾರೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಸಹಾಯಕ ಲೆಕ್ಕಾಧಿಕಾರಿಗಳ ಹಾಗೂ ವಿಷಯ ನಿರ್ವಾಹಕರ ನಿರ್ಲಕ್ಷತನವೇ ಕಾರಣವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-4, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುತ್ತಾರೆ.

3. ಸದರ ಪ್ರಕರಣವನ್ನು ದಿನಾಂಕ: 21-10-2022 ರಂದು ವಿಚಾರಣೆಯನ್ನು ನಡೆಸಲಾಯಿತು. ಆಗ ಈ ಕೆಳಗಿನವರು ಹಾಜರಿದ್ದರು.

ಗ್ರಾಹಕರ ಪರವಾಗಿ,
ಶ್ರೀ ತುಷಾರ ಬದ್ದಿ

ನಿಗಮದ ಪರವಾಗಿ
ಶ್ರೀ ವಿಶ್ವನಾಥ ಶಿರಹಟ್ಟಿಮಠ
ಸ.ಕಾ.ನಿ.ಇಂ(ವಿ)
ಕಾ ಮತು ಪಾ ಶಹರ ಉಪವಿಭಾಗ-4, ಹುಬ್ಬಳ್ಳಿ.

**<u>ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿ, ಹುಬ್ಬಳ್ಳಿ ಇವರ (ಎ) ಫಾರ್ಮನೋದಿಗೆ ಸಲ್ಲಿಸಿದ ಲಿಖಿತ ಹೇಳಿಕೆ ಈ ಕೆಳಗಿನಂತಿರುತ್ತದೆ:</u>**

**BEFORE THE HON'BLE CHAIRMAN & MEMBERS,**
**CONSUMER GRIEVANCE REDRESSAL FORUM**
**HESCOM, HUBBALLI**

In the matter of:

**SHRI MANJUNATH G BADDI**
Represented by Shri Tushar M Baddi,
Age: 41 Years, Occ. Business,
R/o Keshwapur, Hubballi, Dist: Dharwad. .. **COMPLAINANT**

Vs

**1.THE ASST EXE ENGINEER (ELE.)**
O & M CSD-4, HESCOM
Hubballi.

2. **The EXECUTIVE ENGINEER (Ele.)**
O & M Urban Division, HESCOM
Hubballi

.. **LICENSEE**

This complaint is filed with regard to non-compliance by Hubballi Electricity Supply Company Ltd (HESCOM) licensee in terms of KERC Standards of Performance Regulation 2004 with respect to RR No TLUNK-60.

1. The Complainant in his complaint states as follows:

i. The Complainant had filed an application for refund of his Advance Consumption Charges paid during availing temporary power supply to an extent of 1KW duly paying Rs 3570/- vide Rt No 1593648060 dated 30.08.2017. The same was disconnected on 27.11.2017 and accordinglydismantled on 30.01.2018 and the complainant herein sought refund of the said amount through prescribed refund application in duplicate alongwith original receipt on 06.02.2018.

ii. Aggrieved by the inordinate delay in refunding the deposit amount and as the complainant did not hear anything from the licensee the complainant herein moved an application before the licensee claiming Rs 50/- per day as stipulated under Sl.no.14 of KERC Standards of Performance Regulation 2004 on 02.08.2018 (29.07.2018).

iii. The Complainant in this case approached the Forum because of prolonged delay of substantial principal amount (ACC) paid by Complainant. The Complainant primarily seeks directions to Licensee to pay the compensation amount in terms of Sl.no.14 of KERC Standards of Performance Regulation

2004 from the date of filing the refund application i.e. from 06.02.2018 till the refund of ACC amount excluding 2 months grace period, as well as interest in terms of clause 12.01(c) of KERC Conditions of Supply @ 1% per month on actual number of days of delay on the amount due for refund.

iv. The present complaint has been necessitated because HESCOM while showing complete disregard towards the regulations framed by the Commission, has now i.e. in the month of November 2021 adjusted the principle amount in the regular bill in ID 7656072339 without paying the interest or complied with the Standards of Performance.

v. The nature of interest as rightly observed by the Commission is of a charge based on time value of money, for default in timely payment of claims. Non-payment of principle interest would further lead to attraction of penal interest.

vi. Section 142 of the Electricity Act, 2003 provides as under–*(Punishment for non-compliance of directions by Appropriate Commission): In case any complaint is filed before the Appropriate Commission by any person or if that Commission is satisfied that any person has contravened any of the provisions of this Act or the rules or regulations made there under, or any direction issued by the Commission, the Appropriate Commission may after giving such person an opportunity of being heard in the matter, by order in writing, direct that, without prejudice to any other penalty to which he may be liable under this Act, such person shall pay, by way of penalty, which shall not exceed one lakh rupees for each contravention and in case of a continuing failure with an additional penalty which may extend to six thousand rupees for every day during which the failure continues after contravention of the first such direction."*

2. The complainant further wishes to reserve his right to initiate proceedings against the licensee in terms of Sec. 142 & 146 read with clause 3 of 18 of Conditions of licence.

3. Hence, the complainant herein most respectfully prays for necessary directions to the licensee to comply with the Conditions of Supply framed by the Commission and thereafter award further interest @1% per month on the principle amount in the interest of justice and equity with cost, hence prayed accordingly.

4. It is further submitted that according to Section 47(1)of the Electricity Act, the distribution licensee is entitled to recover security from the consumers as determined by the Regulations for payment to him of all monies which may become due to him in respect of electricity supplied and provision of electrical line or plant or meter. As per Section 47(4) of the Electricity Act, the distribution licensee has to pay interest equivalent to bank rate or more as specified by the State Commission in complaint no. 7/2013 who gave such security. Here in this case the deposit is kept as security by the licensee for a period from 06.02.2018 till the date of refund of principle amount.

5. The Prayers of the complainant is as follows:

a. To admit the complaint;
b. To direct the Respondent to pay the compensation as stipulated under Sl.no. 14 of KERC Standards of Performance Regulation 2004;
c. To impose penalty on the Respondent individual for not complying with the regulations framed by the Commission;
d. To award interest in terms of clause 12.01(c) of KERC Conditions of Supply @ 1% per month on actual number of days of delay on the amount due for refund;
e. To pay interest equivalent to "bank rate" as specified by the State Commission in the interest of justice and equity with cost, hence prayed accordingly;
f. Pass such other further order or orders as the Hon'ble Authority may deem just, fit and proper.

**<u>ನಿಗಮದ ಪರವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-4, ಹೆಸ್ಕಾಂ, ಹುಬ್ಬಳ್ಳಿ ಇವರ ಲಿಖಿತ ಹೇಳಿಕೆ:</u>**

ವಿಷಯ:ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಸಲ್ಲಿಸಿರುವ ದೂರಿನ ಕುರಿತು.
ಉಲ್ಲೇಖ:ಅಇಂ(ವಿ)/ಉಲೆನಿ/ಹಿಸ-1/ಸಿ.ಜಿ.ಆರ್.ಎಫ್-258/2021-22/6297-98 ದಿ:03-03-2022.

..............

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಹಕರ ಕುಂದುಕೊರತೆ ನಿರ್ವಹಣಾ ವೇದಿಕೆಗೆ ಈ ಕೆಳಗಿನಂತೆ ಉತ್ತರವನ್ನು ನೀಡಲು ಬಯಸುತ್ತೇನೆ. ಶ್ರೀ ಮಂಜುನಾಥ ಬದ್ದಿ, ಉಣಕಲ್ ಇವರ ಸ್ಥಾವರ ಸಂಖ್ಯೆ:TLUNK-60 ಅಕೌಂಟ್ ಐಡಿ-1593648404 ಕ್ಕೆ ಪಡೆದ ಮುಂಗಡ ಬಳಕೆ ಶುಲ್ಕ ಮರುಪಾವತಿಗೆ ದಿ:07-02-2018 ರಂದು ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ದಿ:07-02-2018 ರಂದು ಸದರಿ ಅರ್ಜಿಯನ್ನು ಮರುಪಾವತಿಗೆ ವಿಭಾಗೀಯ ಕಚೇರಿಗೆ ಸಲ್ಲಿಸಲು ಸೂಚಿಸಿ ಸಹಾಯಕ ಲೆಕ್ಕಾಧಿಕಾರಿ ಇವರಿಗೆ ಸೂಕ್ತ

.......4

ಕ್ರಮಕ್ಕಾಗಿ ರವಾನಿಸಿದ್ದು, ಇರುತ್ತದೆ. ತದನಂತರ ಸಂಬಂಧಪಟ್ಟ ವಿಷಯ ನಿರ್ವಾಹಕರಾದ ಶ್ರೀ ಪ್ರಭಾಕರ ಹುಕ್ಕೇರಿ ಇವರಿಗೂ ಕೂಡ ಸದರಿ ಅರ್ಜಿಯ ಮರುಪಾವತಿಗಾಗಿ ವಿಭಾಗೀಯ ಕಚೇರಿಗೆ ಸಲ್ಲಿಸಲು ಕ್ರಮ ಕೈಗೊಳ್ಳಲು ಸೂಚಿಸಿದ್ದು ಇರುತ್ತದೆ.

ಮುಂದುವರೆದು ಸದರಿ ಸ್ಥಾವರ ಸಂಖ್ಯೆ:TLUNK-60 ಅಕೌಂಟ್ ಐಡಿ-1593648404 ರ ಮುಂಗಡ ಬಳಕೆ ಶುಲ್ಕ ಮರು ಪಾವತಿ ವಿಳಂಬವಾಗಿದ್ದರಿಂದ ದಿ:02-08-2018 ರಂದು ಶ್ರೀ ಮಂಜುನಾಥ ಜಿ ಬದ್ದಿ, ಇವರು KERC Standard of Performance ಪ್ರಕಾರ ಹಿಂಪಾವತಿಗೆ ವಿಳಂಬವಾದ ದಿನಗಳಿಗೆ ಪ್ರತಿ ದಿನಕ್ಕೆ ಸಾಂತ್ವಾನ ಮೊತ್ತ ರೂ.50/- ಗಳನ್ನು ಪಾವತಿಸುವಂತೆ ಅರ್ಜಿ ಸಲ್ಲಿಸಿರುತ್ತಾರೆ.

ಈ ಅರ್ಜಿಯನ್ನು ಸಹ ದಿ:02-08-2018 ರಂದು ಸಹಾಯಕ ಲೆಕ್ಕಾಧಿಕಾರಿ ಇವರಿಗೆ ಮುಂಗಡ ಶುಲ್ಕ ಹಿಂಪಾವತಿಗೆ ಕ್ರಮ ವಹಿಸಿ ವಿಭಾಗೀಯ ಕಚೇರಿಗೆ ಮಂಜೂರಾತಿ ಸಲ್ಲಿಸಲು ಸೂಚಿಸಿ ನೀಡಲಾಗಿರುತ್ತದೆ. ಆದರೆ ಈ ವಿಷಯದಲ್ಲಿ ಸಹಾಯಕ ಲೆಕ್ಕಾಧಿಕಾರಿ ಮತ್ತು ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಪದೇ ಪದೇ ಎಚ್ಚರಿಸಿದರೂ ಕೂಡಾ ಈ ಬಗ್ಗೆ ಕ್ರಮ ಕೈಗೊಳ್ಳದೆ ವಿಳಂಬ ನೀತಿಯನ್ನು ಅನುಸರಿಸಿರುತ್ತಾರೆ. ಕೊನೆಗೆ ನವೆಂಬರ್-2021 ರಲ್ಲಿ ಇನ್ನೊಂದು ಅಕೌಂಟ್ ಐ.ಡಿ 7656072339 ಗೆ ಗ್ರಾಹಕರ ಒಪ್ಪಿಗೆಯಂತೆ ಮುಂಗಡ ಶುಲ್ಕವನ್ನು ವರ್ಗಾವಣೆ ಮಾಡಿರುತ್ತಾರೆ.

ಆದ್ದರಿಂದ ಮೇಲಿನ ಅಂಶಗಳನ್ನು ಪರಗಣಿಸಿ ಸ್ಥಾವರ ಸಂಖ್ಯೆ: TLUNK-60 ಅಕೌಂಟ್ ಐಡಿ-1593648404 ನ ಮುಂಗಡ ಶುಲ್ಕ ಮರುಪಾವತಿಯಲ್ಲಿ ಆದ ವಿಳಂಭಕ್ಕೆ ಆ ಅವಧಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಹಾಯಕ ಲೆಕ್ಕಾಧಿಕಾರಿ ಮತ್ತು ವಿಷಯ ನಿರ್ವಾಹಕರ ನಿರ್ಲಕ್ಷ್ಯತನವೇ ಕಾರಣವಾಗಿದ್ದು ಇರುತ್ತದೆ.

**ಪ್ರಕರಣದ ಸಾರಾಂಶದ ಮೇಲೆ ವೇದಿಕೆಯ ಅಭಿಪ್ರಾಯ:**

ಸದರ ಪ್ರಕರಣದಲ್ಲಿ ಗ್ರಾಹಕರ ಹೇಳಿಕೆ ಹಾಗೂ ನಿಗಮದ ಅಧಿಕಾರಿಗಳ ಹೇಳಿಕೆ ಮತ್ತು ಕಡತದಲ್ಲಿಯ ಕಾಗದ ಪತ್ರಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಮಾಹಿತಿ ಕಂಡು ಬರುತ್ತದೆ.

1. ಶ್ರೀ ಮಂಜುನಾಥ ಜಿ ಬದ್ದಿ, ತಾತ್ಕಾಲಿಕ ಸ್ಥಾವರ ಸಂಖ್ಯೆ: TLUNK-60(ID 1593648404) 1 ಕಿ.ವ್ಯಾ ವಿದ್ಯುತ್ ಮಂಜೂರಾತಿ ಬಾರದೊಂದಿಗೆ ದಿನಾಂಕ:30-08-2017 ರಂದು ತಾತ್ಕಾಲಿಕವಾಗಿ ಸಂಪರ್ಕಗೊಂಡಿದ್ದಿರುತ್ತದೆ. ಸದರಿ ಸ್ಥಾವರವು ದಿನಾಂಕ:30-01-2018 ರಂದು ಡಿಸ್‌ಮೆಂಟಲ್ ಮಾಡಿದ್ದಿರುತ್ತದೆ. ತಾತ್ಕಾಲಿಕ ಸ್ಥಾವರದ ಮುಂಗಡ ಬಳಕೆ ಶುಲ್ಕ ಮೊತ್ತ ರೂ.3570/- ಗಳನ್ನು ಹಿಂಪಾವತಿಸಲು ದಿನಾಂಕ:07-02-2018 ರಂದು ವಿಳಂಭವಾದ ದಿನಗಳಿಗೆ ಕ್ರಮ ಸಂಖ್ಯೆ-14 ಕೆ.ಇ.ಆರ್.ಸಿ.(ಎಸ್.ಓ.ಪಿ) ರೇಗ್ಯೂಲೇಷನ್-2004 ರಂತೆ ಸಾಂತ್ವಾನ ಮೊತ್ತವನ್ನು ಪಾವತಿಸಲು ಲೈಸನ್ಸುದಾರರಲ್ಲಿ ಅರ್ಜಿ ಸಲ್ಲಿಸಿರುವುದು ಕಂಡುಬರುತ್ತದೆ. ವಿಳಂಭವಾದ ದಿನಗಳಿಗೆ ಕ್ರಮ ಸಂಖ್ಯೆ-14 ಕೆ.ಇ.ಆರ್.ಸಿ.(ಎಸ್.ಓ.ಪಿ) ರೇಗ್ಯೂಲೇಷನ್-2004 ರಂತೆ ಸಾಂತ್ವಾನ ಮೊತ್ತವನ್ನು ಮತ್ತು ಮುಂಗಡ ವಿದ್ಯುತ್ ಬಳಕೆ ಶುಲ್ಕದ(A.C.C) ಮೊತ್ತಕ್ಕೆ ತಿಂಗಳಿಗೆ 1% ಬಡ್ಡಿದರದಲ್ಲಿ ದಂಡವನ್ನು ಪಾವತಿಸಿಕೊಡುವಂತೆ ವಿನಂತಿಸಿ, ಗ್ರಾಹಕರ ಪರವಾಗಿ ಶ್ರೀ ತುಷಾರ ಎಂ ಬದ್ದಿರವರು ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ದಿನಾಂಕ:28-02-2022 ರಂದು ಅರ್ಜಿ ಸಲ್ಲಿಸಿರುವುದು ಕಂಡುಬರುತ್ತದೆ.
2. ಶ್ರೀ ಮಂಜುನಾಥ ಜಿ ಬದ್ದಿ, ತಾತ್ಕಾಲಿಕ ಸ್ಥಾವರ ಸಂಖ್ಯೆ:TLUNK-60(ID 1593648404) 1 ಕಿ.ವ್ಯಾ ವಿದ್ಯುತ್ ಮಂಜೂರಾತಿ ಬಾರದೊಂದಿಗೆ ದಿನಾಂಕ:30-08-2017 ರಂದು ತಾತ್ಕಾಲಿಕವಾಗಿ ಸಂಪರ್ಕಗೊಂಡಿದ್ದಿರುತ್ತದೆ. ಸದರಿ ಸ್ಥಾವರದ ಮುಂಗಡ ಬಳಕೆ ಶುಲ್ಕವನ್ನು ಮರುಪಾವತಿಗೆ ದಿನಾಂಕ:07-02-2018 ರಂದು ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ಅರ್ಜಿಯನ್ನು ದಿನಾಂಕ:07-02-2018 ರಂದು ಮರುಪಾವತಿಗಾಗಿ ವಿಭಾಗೀಯ ಕಚೇರಿಗೆ ಸಲ್ಲಿಸಲು ಸೂಚಿಸಿ ಸಹಾಯಕ ಲೆಕ್ಕಾಧಿಕಾರಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದ್ದು ಇರುತ್ತದೆ. ತದನಂತರ ಸಂಬಂಧಪಟ್ಟ ವಿಷಯ ನಿರ್ವಾಹಕರಾದ ಶ್ರೀ ಪ್ರಭಾಕರ ಹುಕ್ಕೇರಿ ಇವರಿಗೂ ಕೂಡ ಸದರಿ ಅರ್ಜಿಯ ಮರುಪಾವತಿಗಾಗಿ ವಿಭಾಗೀಯ ಕಚೇರಿಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ. ತದನಂತರ ಶ್ರೀ ಮಂಜುನಾಥ ಜಿ ಬದ್ದಿ ಇವರು KERC Standard of Performance ಪ್ರಕಾರ ಹಿಂಪಾವತಿಗೆ ವಿಳಂಭವಾದ ದಿನಗಳಿಗೆ ಪ್ರತಿ ದಿನಕ್ಕೆ ಸಾಂತ್ವಾನ ಮೊತ್ತ ರೂ. 50/- ಗಳನ್ನು ಪಾವತಿಸುವಂತೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ಸಹ ಸಹಾಯಕ ಲೆಕ್ಕಾಧಿಕಾರಿಯವರಿಗೆ ಹಾಗೂ ವಿಷಯ ನಿರ್ವಾಹಕರಿಗೆ ಮುಂಗಡ ಬಳಕೆ ಶುಲ್ಕವನ್ನು ಹಿಂಪಾವತಿಸುವ ಅರ್ಜಿಯನ್ನು ವಿಭಾಗೀಯ ಕಚೇರಿಯ ಮಂಜೂರಾತಿಗೆ ಸಲ್ಲಿಸಲು ಸೂಚಿಸಿ ಎಚ್ಚರಿಸಿದರೂ ಸಹ ಈ ಬಗ್ಗೆ ಕ್ರಮ ಕೈಗೊಳದೇ ವಿಳಂಭ ಮಾಡಿದ್ದು, ನವೆಂಬರ್-2021 ರಲ್ಲಿ ಸದರಿ ಗ್ರಾಹಕರ ಇನ್ನೊಂದು ಸ್ಥಾವರದ ಅಕೌಂಟ್ ಐ.ಡಿ-7656072339 ಕ್ಕೆ ಗ್ರಾಹಕರ ಒಪ್ಪಿಗೆಯಂತೆ ಮುಂಗಡ ಬಳಕೆ ಶುಲ್ಕವನ್ನು ವರ್ಗಾವಣೆ ಮಾಡಿರುವುದು ಕಂಡು ಬರುತ್ತದೆ. ಆದ್ದರಿಂದ ಸದರಿ ಪ್ರಕರಣದಲ್ಲಿ ಆ ಅವಧಿಯಲ್ಲಿ ಕಾರ್ಯನಿರ್ವಹಿಸಿದ್ದ,

.......5

ಸಹಾಯಕ ಲೆಕ್ಕಾಧಿಕಾರಿಗಳ ಹಾಗೂ ವಿಷಯ ನಿರ್ವಾಹಕರ ನಿರ್ಲಕ್ಷತನವೇ ಕಾರಣವೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ) ಕಾ ಮತ್ತು ಪಾ ಶಹರ ಉಪ ವಿಭಾಗ-4, ಹೆಸ್ಕಾಂ, ಹುಬ್ಬಳ್ಳಿರವರು ವೇದಿಕೆಗೆ ವಿನಂತಿಸಿಕೊಂಡಿರುವುದು ಕಂಡುಬರುತ್ತದೆ.

ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ, ಗ್ರಾಹಕರ ಮುಂಗಡ ಬಳಕೆ ಶುಲ್ಕ ಮೊತ್ತ ರೂ.3570/-ಗಳನ್ನು ಹಿಂಪಾವತಿಸುವಲ್ಲಿ ಸಹಾಯಕ ಲೆಕ್ಕಾಧಿಕಾರಿ ಹಾಗೂ ವಿಷಯನಿರ್ವಾಹಕರ ನಿರ್ಲಕ್ಷತನವೇ ಕಾರಣವೆಂದು ಎಂದು ಕಾರಣ ನೀಡಿರುವುದು ಸಕಾರಣವಾಗಿರುವುದಿಲ್ಲ. ಸದರಿ ಪ್ರಕರಣದಲ್ಲಿ ಗ್ರಾಹಕರು ವಿನಂತಿಸಿಕೊಂಡಿರುವಂತೆ K.E.R.C(SOP) ಕ್ರಮಸಂಖ್ಯೆ-14 ರಂತೆ ಸಾಂತ್ವಾನ ಮೊತ್ತವನ್ನು ಗ್ರಾಹಕರಿಗೆ ನೀಡುವುದಕ್ಕೆ ಅವಕಾಶ ವಿರುವುದಿಲ್ಲ ಮತ್ತು ವಿದ್ಯುಚ್ಛಕ್ತಿ ಅಧಿನಿಯಮ 2003, ಸೆಕ್ಷನ್ 142 ಮತ್ತು 146 ರ ಪ್ರಕಾರ ಲೈಸನ್ಸುದಾರರ ವಿರುದ್ಧ ಕ್ರಮ ತೆಗೆದುಕೊಳ್ಳುವ ಅಧಿಕಾರವು ಈ ವೇದಿಕೆ ವ್ಯಾಪ್ತಿಗೆ ಬರುವುದಿಲ್ಲ. ಮುಂದುವರೆದು ಸದರಿ ಪ್ರಕರಣದಲ್ಲಿ ಗ್ರಾಹಕರ ತಾತ್ಕಾಲಿಕ ಸ್ಥಾವರದ ಎ.ಸಿ.ಸಿ. ಮೊತ್ತವನ್ನು Conditions of Supply of Electricity of Distribution Licensees in the Sate of Karnataka ರ ರೆಗ್ಯೂಲೇಷನ್ 12.01(c) ಪ್ರಕಾರ ಗ್ರಾಹಕರು ಅರ್ಜಿ ಸಲ್ಲಿಸಿದ ದಿನಾಂಕದಿಂದ 2 ತಿಂಗಳುಗಳೊಳಗಾಗಿ ಲೈಸನ್ಸುದಾರರು ಮರುಪಾವತಿಸಬೇಕಾಗಿದ್ದು, ಲೈಸನ್ಸುದಾರರು ಗ್ರಾಹಕರ ತಾತ್ಕಾಲಿಕ ಸ್ಥಾವರದ ಮುಂಗಡ ಬಳಕೆ ಶುಲ್ಕವನ್ನು ಮರು ಪಾವತಿಸಲು ದಿನಾಂಕ:07-04-2018 ರಿಂದ 07-11-2021 ರವರೆಗೆ ವಿಳಂಬ ಮಾಡಿರುವುದು ಮೇಲಿನ ಅಂಶಗಳಿಂದ ಕಂಡುಬರುತ್ತದೆ. ಆದ್ದರಿಂದ ವಿಳಂಬದ ಅವಧಿಗೆ Conditions of Supply of Electricity of Distribution Licensees in the Sate of Karnataka ರ ರೆಗ್ಯೂಲೇಷನ್ 12.01(c) ರ ಅನ್ವಯ ಲೈಸನ್ಸುದಾರರು ಬ್ಯಾಂಕ್ ಉಳಿತಾಯ ಖಾತೆಯ ಬಡ್ಡಿದರಲ್ಲಿ ಬಡ್ಡಿಯನ್ನು ಗ್ರಾಹಕರಿಗೆ ಪಾವತಿಸಲು ಬಾಧ್ಯಸ್ಥರಾಗಿರುತ್ತಾರೆ. ಆದ್ದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ:ಅಇಂ(ವಿ)/ಉಲೆನಿ/ಹಿಸ-1/ಗ್ರಾಕುಂಕೊನಿವೇ/ಕಡತ-258/2022/**CYS-907 **ದಿನಾಂಕ:** 31 OCT 2022

ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಗೆ ಆದೇಶ ಸಂಖ್ಯೆ: ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/ 13-14/ಸಿವೈಎಸ್-769 ದಿ:06-07-2013 ರನ್ವಯ ಹಾಗೂ ಹೆಸ್ಕಾಂ/ಜಿಎಂ(ಟಿ)/ಇಇ-4/ಎಓ/19-20/ ಸಿವೈಎಸ್-5493 ದಿ.12.03.2020 ಮತ್ತು HESCOM/DF/CA/DCA/AO(RA)/2021-22/CYS-6004 Date:18-02-2022 ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗಿನಂತೆ ಆದೇಶಿಸಲಾಗಿದೆ.

1. ಗ್ರಾಹಕರ ಮನವಿಯನ್ನು ಭಾಗಶಃ ಪುರಸ್ಕರಿಸಲಾಗಿದೆ.
2. ಲೈಸನ್ಸುದಾರರು Conditions of Supply of Electricity of Distribution Licensees in the Sate of Karnataka ರ ರೆಗ್ಯೂಲೇಷನ್ 12.01(c) ರ ಅನ್ವಯ ಕ್ರಮ ಜರುಗಿಸಲು ಸೂಚಿಸಲಾಗಿದೆ.
3. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ (ಸಂಬಂಧಿತ) ಅಧಿಕಾರಿ/ನೌಕರರನ್ನು ಜವಾಬ್ದಾರರನ್ನಾಗಿಸಿ, ನಿಯಮಾವಳಿಗಳನ್ವಯ ಶಿಸ್ತು ಕ್ರಮ ಕೈಗೊಳ್ಳುವುದು.

**(ರೇವಣಸಿದ್ದಪ್ಪ ಗವಣ್ಣವರ)**
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ ಮತ್ತು ಪಾ ವೃತ್ತ, ಹುಬ್ಬಳ್ಳಿ

**(ಶ್ರೀಮತಿ ಲೀಲಾ ಆರ್ ಹಿರೇಮಠ)**
ಆಯೋಗದಿಂದ ನಿಯೋಜಿಸಲಾ
ಸದಸ್ಯರು.

**(ಶ್ರೀಮತಿ ಶರಣಮ್ಮ ಎಸ್ ಜಂಗಿನ)**
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವಲಯ ಕಚೇರಿ, ಹೆಸ್ಕಾಂ, ಹುಬ್ಬಳ್ಳಿ
ಹಾಗೂ ಅಧ್ಯಕ್ಷರು, ಧಾರವಾಡ ಜಿಲ್ಲೆ
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,

**ಶ್ರೀ ಮಂಜುನಾಥ ಜಿ ಬದ್ದಿ,**
C/o ತುಷಾರ ಎಂ ಬದ್ದಿ,
ಅರಿಹಂತ ಪಾರ್ಕ,
ಕೇಶ್ವಾಪೂರ ಹುಬ್ಬಳ್ಳಿ-580023.

**"ನೊಂದಣಿ ಅಂಚೆ ಮೂಲಕ"**

O/C

**ಪ್ರತಿ:**

1. ಮುಖ್ಯ ಇಂಜಿನೀಯರ(ವಿ), ಹುಬ್ಬಳ್ಳಿ ವಲಯ, ಹುವಿಸಕಂನಿ., ಕೇಶ್ವಾಪುರ, ಹುಬ್ಬಳ್ಳಿ-23 ಇವರ ದಯಾಪರ ಮಾಹಿತಿಗಾಗಿ.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಕಂಪನಿ ಕಛೇರಿ, ಹುವಿಸಕಂನಿ, ಹುಬ್ಬಳ್ಳಿರವರ ಆದರ ಪೂರ್ವಕ ಮಾಹಿತಿಗಾಗಿ
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ನಗರ ವಿಭಾಗ, ಹುವಿಸಕಂನಿ., ಹುಬ್ಬಳ್ಳಿರವರ ಮಾಹಿತಿಗಾಗಿ. ಸೂಕ್ತ ಕ್ರಮಕ್ಕಾಗಿ.

.......6